ಘಾನರೆ ಇರುವಂಥ ಒಂದು ಆಂಧ್ರದ ಜೊರು ಬರುತ್ತದೆ. ಅದರ ಬಗ್ಗೆ ಇನ್ನೂ ಒಂದು ತೀರ್ಮಾನಕ್ಕೆ ಬಂದಿಲ್ಲ. ಆದುದರಿಂದ ನಿಧಾನವಾಗಿದೆ.

ಶ್ರೀ ಟಿ. ಹನುಮಯ್ಯ.—ಆ ಆಂಧ್ರದೇಶದಿಂದ ಅನೇಕ ಬಸ್ಸುಗಳು ನಮ್ಮ ಮೈಸೂರು ದೇಶಕ್ಕೆ ಬರುತ್ತಿವೆಯೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಬಂದಿದೆ.

ಶ್ರೀ ಟಿ. ಹನುಮಯ್ಯ.—ಹಾಗೆ 4-5 ಮೈಲುಗಳ ಒಂದು ಜೂರು ಬಂದದ್ದರಿಂದಲೇ ಇಷ್ಟು ತಡವಾಗಬೇಕೇ?

Mr. SPEAKER.—You are not expected to answer, but only to ask for information.

ಶ್ರೀ ಬಿ. ರಾಚಯ್ಯ.—ಈಗ ತಾವು ಮೈಸೂರಿಂದ ನಂಜನಗೂಡಿಗೆ ಬಿಡುತ್ತಿರುವ ಬಸ್ ಲೈನನ್ನು ಮುಂದಕ್ಕೆ ಚಾಮರಾಜನಗರದವರೆಗೂ ಮುಂದುವರಿಸುವಿರಾ?

Sri H. SIDDAVEERAPPA.—I will consider.

ಶ್ರೀ ಬಿ. ಎಕ್. ಬೋರಣ್ಣಗೌಡ.—ತಾವೀಗ ಈ ಬಸ್ ಕಂಡಕ್ಟರುಗಳಿಗೆ ಕೊಡುತ್ತಿರುವುದು ತೀರಾ ಕಡಮೆ ಸಂಬಳ ಅಲ್ಲವೇ?

Sri H. SIDDAVEERAPPA.—We have introduced the system of bonus, provident fund, credit fund and all that.

Sri V. M. MASCARENHAS.—In answer to Question No. 221 (*h*), you have stated "Condemned.—12. Overaged.—18." What is the fine distinction between the two?

ಶ್ರೀ ಎಚ್. ಸಿದ್ದವೀರಪ್ಪ.—Overaged ಬಸ್ಸುಗಳೆಂದರೆ ನಾಲ್ಕು ವರ್ಷಕ್ಕೆ ಮೇಲ್ಪಟ್ಟು ಕೆಲಸಮಾಡಿ ನಾಲಾಯಃಖಾದ ಬಸ್ಸುಗಳೆಂದೂ, ಹಾಗೆ ನಾಲ್ಕು ವರ್ಷ ಕೆಲಸ ಮಾಡದೆ ಮಧ್ಯಕಾಲದಲ್ಲೇ ಕೆಲಸಕ್ಕೆ ಬಾರದಂಥ ವಾಹನಗಳಿಗೆ condemned ವಾಹನಗಳೆಂದೂ ಹೇಳಲಾಗಿದೆ. If it is incapacitated, it is condemned.

Sri V. M MASCARENHAS.—Are the two categories of any use to the State?

Sri H. SIDDAVEERAPPA.—They are not. I am now selling them out for whatever they are worth. Others have given full service.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಈ ಬಸ್ ಪಾಲೀಕರಿಗೆ ಅವರ ಲೈನುಗಳನ್ನು ಮನಾಪಲೈಜ್ ಮಾಡಿಕೊಳ್ಳುವ ಮುನ್ನ ಅವರಿಗೊಂದು ಪರಿಹಾರ ಕೊಟ್ಟ ಅನಂತರ ಆ ಲೈನುಗಳನ್ನು ಮನಾಪಲ ಮಾಡಿಕೊಳ್ಳಬೇಕೆಂಬ ಒಂದು ಪ್ರಶ್ನೆ ಲೋಕಸಭೆಯ ಮುಂದೆ ಈಗ ಇರತಕ್ಕ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ತಾವು ಈ ವಿಷಯವನ್ನು ಈ ರೂಪದಲ್ಲಿ ಹೇಳಿದ್ದೀರಿ. ನಾನು ಇದನ್ನೇ ಕಾನೂನು ರೂಪದಲ್ಲಿ ಹೇಳಿದ್ದೇನೆ. ನಾವೂ ಸಹ ಅದೇ ರೀತಿ ಇಲ್ಲಿ ಅನುಸರಿಸಬೇಕೆಂಬ ವಿಚಾರ ಪರ್ಯಾಲೋಚನೆಯಲ್ಲಿದೆ.

ಶ್ರೀ ಟಿ. ಸಿ. ಬಸಪ್ಪ.—ಈ ಟ್ರಾಫಿಕ್ ಮ್ಯಾನೇಜರು ಗಳಿಗೂ ಮತ್ತು ಟ್ರಾಫಿಕ್ ನೂಪರಿಂಟೆಂಡೆಂಟರಿಗೂ ಸಂಬಳದ ಗ್ರೇಡು ಒಂದೇನೆ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ಈ ಟ್ರಾಫಿಕ್ ಮ್ಯಾನೇಜರುಗಳ ಗ್ರೇಡನ್ನು ಹೆಚ್ಚಿಸಬೇಕೆಂದು ಹೇಳಿದ್ದೆವು. ಇಲ್ಲಿ ಮುದ್ರಣದ ಲೋಪವಾಗಿದೆ.

ಶ್ರೀ ಟಿ. ಸಿ. ಬಸಪ್ಪ.—ಸರ್ಕಾರದವರೇ ಏನಾದರೂ ಗುಟ್ಟಾಗಿ ಈ ಸರ್ಕಾರಿ ಬಸ್ಸುಗಳಲ್ಲಿ ಓವರ್ ಲೋಡ್ ಮಾಡಬಹುದೆಂದು ಆ ಬಸ್ ನಡೆಸತಕ್ಕವರಿಗೆ ಹೇಳಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗೆ ಓವರ್‌ಲೋಡ್ ಮಾಡಬಾರದೆಂದು ಖಚಿತವಾಗಿ ಳಿಸಿದ್ದೇವೆ.

ಶ್ರೀ ಟಿ. ಸಿ. ಬಸಪ್ಪ.—ಹಾಗೆ ಈ ಸರ್ಕಾರಿ ಬಸ್ಸುಗಳಲ್ಲಿ ಓವರ್‌ಲೋಡ್ ಇದ್ದಾಗ ಪೋಲೀಸಿನವರಿಗೆ ಫಿರ್ಯಾದು ಕೊಟ್ಟರೆ—ಆಗ ಅವರು "ಈ ಬಸ್ಸುಗಳ ಮೇಲೆ ಕೇಸ್ ಹಾಕುವುದಕ್ಕೆ ಆಗುವುದಿಲ್ಲ" ಎಂದು ಆ ಕೇಸುಗಳನ್ನೇ ಹಿಡಿಯುತ್ತಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಪೋಲೀಸಿನವರು ಕೇಸುಗಳನ್ನು ತೆಗೆದುಕೊಂಡು ಎಷ್ಟೋ ಸಂದರ್ಭಗಳಲ್ಲಿ ಹಾಕಿದ್ದಾರೆ.

ಶ್ರೀ ಟಿ. ಸಿ. ಬಸಪ್ಪ.—ಹಾಗೆ ಅವರು ಓವರ್ ಲೋಡ್ ಮಾಡತಕ್ಕ ಕಾಲದಲ್ಲಿ ಪ್ರಯಾಣಿಕರಿಗೆ ಟಿಕೆಟ್ಟುಗಳನ್ನು ಕೊಡುತ್ತಾರೋ ಅಥವಾ ಹಾಗೆಯೇ ದುಡ್ಡನ್ನು ತೆಗೆದುಕೊಂಡು ಅವರನ್ನು ಕರೆದುಕೊಂಡು ಹೋಗುತ್ತಾರೋ?

ಶ್ರೀ ಎಚ್. ಸಿದ್ದವೀರಪ್ಪ.—ಟಿಕೀಟುಗಳನ್ನು ಕೊಟ್ಟೇ ಕೊಡುತ್ತಾರೆ.

Bus Accidents.

Q.—232. Sri M. CHIKKALINGIAH (Malavalli—Scheduled Castes).—

Will the Government be pleased to state:—

(*a*) the number of bus accidents that occurred in the State for the last three years;

(*b*) the nature and results of bus accidents in the State for the last three years;

(*c*) action taken in such cases, *viz.*, convictions, acquittals or withdrawn?

A.—Sri H. SIDDAVEERAPPA (Minister for Home and Industries).—

(*a*), (*b*) and (*c*) Please see Statement appended.

(SRI H. SIDDAVEERAPPA.)

Statement showing the number of bus accidents, nature and results and action taken for the years 1952, 1953 and 1954.

Year	No. of bus accidents	Natural deaths	Injured	Convictions	Acq. or Dis.	Treated as accidents	Results		Withdrawn
							Pending trial	Pending with Police	
1952 ...	163	20	102	52	27	82	...	2	...
1953 ...	212	41	159	75	22	106	3	4	2
1954 ...	223	49	161	72	18	76	37	6	...

ಶ್ರೀ ಎಂ. ಚಿಕ್ಕಲಿಂಗಯ್ಯ.—ಹೀಗೇಕೆ\ಈ ಬಸ್ ಆಕ್ಸಿಡೆಂಟುಗಳು ವರ್ಷ್‌ವರ್ಷ್‌ ಜಾಸ್ತಿಯಾಗುತ್ತಾ ಇವೆ ?

ಶ್ರೀ ಎಚ್. ಸಿದ್ದವೀರಪ್ಪ.—ವರ್ಷ್‌ವರ್ಷ್‌ ಬಸ್ಸುಗಳ ಓಡಾಟ ಹೆಚ್ಚುತ್ತಿರುವುದರಿಂದ ಅಪಾಯಗಳ ಸಂದರ್ಭಗಳೂ ಹೆಚ್ಚಾಗುತ್ತಿವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹಾಗಾದರೆ ಈ ಬಸ್‌ಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಆ ಗಾಡಿಗಳ್ಕೇನು ಓಡಲು ರಾಯಃಖಾಗಿವೆಯೆ, ಇಲ್ಲವೇ ಎನ್ನತಕ್ಕ ಬಗ್ಗೆ ಪರೀಕ್ಷೆ ಮಾಡುತ್ತಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಮಾಡುತ್ತಾರೆ. ಆದರೆ ಆ ಒಂದೇ ಕಾರಣವಲ್ಲ: ಅಪಾಯಗಳು ಸಂಭವಿಸಲು ನಾನಾ ಕಾರಣಗಳಿವೆ. ತಮಗೆ ಗೊತ್ತಿರುವಹಾಗೆ ಒಂದೊಂದು ವೇಳೆ ಹೊಸ ಕಾರುಗಳ ಆಕ್ಸಿಡೆಂಟ್ ಕೂಡ ಆಗುತ್ತದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಉತ್ತರದಲ್ಲಿ ಬಸ್ಸು ಅಪಘಾತಗಳ ಸಂಖ್ಯೆ ಎಂದು ಒಂದು ಕಡೆಯೂ—ಮತ್ತೊಂದು ಕಡೆ ಅಪಘಾತಗಳೆಂದು ಎಣಿಸಲ್ಪಟ್ಟ ಸಂದರ್ಭಗಳು ಎಂದು ತಿಳಿಸಲಾಗಿದೆ. ಇವುಗಳಲ್ಲಿ ವ್ಯತ್ಯಾಸವೇನು ?

ಶ್ರೀ ಎಚ್. ಸಿದ್ದವೀರಪ್ಪ.—Number of bus accidents ಎಂದರೆ ಕೋರ್ಟಿಗೆ ಹಾಕಲು ರಾಯಃಖಾದ ಕೇಸುಗಳೆಂದೂ, ಹಾಗೆ ದಾಖಲಾದ ಕೇಸುಗಳಲ್ಲಿ ತೀರ್ಮಾನ ಕೊಡುವಾಗ ಡ್ರೈವರನ ನೆಗ್ಲಿಜೆಂಟ್ ಡ್ರೈವಿಂಗ್, ರ್ಯಾಷ್ ಡ್ರೈವಿಂಗ್ ಇತ್ಯಾದಿಗಳಲ್ಲೆಲ್ಲಾ 'For reasons beyond the control of the driver, these accidents have happened' ಎಂದು ಅವರನ್ನು ಖುಲಾಸೆ ಮಾಡುತ್ತಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಇಲ್ಲಿ ತಾವು natural deaths ಎಂದು ತಿಳಿಸಿದ್ದೀರಲ್ಲ, ಇದರ ಅರ್ಥವೇನು ?

ಶ್ರೀ ಎಚ್. ಸಿದ್ದವೀರಪ್ಪ.—'Natural death' ಎಂದರೆ—sometimes it happens—what is called printer's devil. Under the column "Nature", "Deaths" and "Injured" form sub-columns.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಗವರ್ನ್‌ಮೆಂಟ್ ಬಸ್ಸುಗಳಿಂದ ಎಷ್ಟು ಅಪಘಾತಗಳು ಆಗಿವೆಯೆಂಬುದನ್ನು ತಿಳಿಸುವುದಕ್ಕಾಗುತ್ತದೆಯೇ ?

Sri H. SIDDAVEERAPPA.—Yes, I can give you the information during the period under review.

1952	...	25
1953	...	24
1954	...	16

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಬಸ್ ನಡೆಸತಕ್ಕವರು ಎಂದರೆ ಡ್ರೈವರುಗಳು ದಿನ ಒಂದಕ್ಕೆ ಇಷ್ಟೇ ಮೈಲಿ ನಡೆಸಬೇಕೆಂಬ ನಿಯಮವೇನೂ ಇಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ದಿನವಹಿ ಇಷ್ಟಿಷ್ಟೇ ಮೈಲಿ ಡ್ರೈವಿಂಗ್ ಮಾಡಬೇಕೆಂಬ ಬಗ್ಗೆ ಕಾನೂನಿನಲ್ಲಿ ಎಲ್ಲವನ್ನೂ ವಿಧಾಯಕಮಾಡಿದೆ. ಅದರ ಪ್ರಕಾರವೇ ಅವರೀಗ ನಡೆಸುತ್ತಿದ್ದಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಅಪಘಾತಗಳಲ್ಲಿ ಎಷ್ಟು ಜನ ಸಿಕ್ಕಿ ಸತ್ತಿದ್ದಾರೋ ಅವರಿಗೆ ಪರಿಹಾರವನ್ನೇ ನಾದರೂ ಕೊಡಲಾಗಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಉಚಿತವಾದಂಥ ಸಂದರ್ಭಗಳಲ್ಲಿ ಪರಿಹಾರವನ್ನು ಕೊಡಲಾಗಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ತಾವು ಉತ್ತರದಲ್ಲಿ 2 ಕೇಸುಗಳನ್ನು ಖಾಪಸ್ಸು ತೆಗೆದುಕೊಳ್ಳಲಾಯಿತೆಂದು ತಿಳಿಸಿದ್ದೀರಿ. ಅವುಗಳು ಯಾವುವು ?

Sri H. SIDDAVEERAPPA.—(1) On 20th May 1952 the accident took place at the junction of Sri Subbarama Setti and Nagasandra Roads. The accident was between Car No. MY 6666 X and BTC Bus No. MY 4490 X. The Deputy Commissioner has withdrawn that case. (2) On 7th August 1954 the accident took place at Kalaspalya main road near Automobile Stores. The accident was between Car No.

MY 9941 X and Bus No. MY 6661 X. The owner and driver of the car is Sri D. Bheema Rao of Robertsonpet. Since nobody was injured, the case against the car driver was withdrawn by the Deputy Commissioner.

12-30 P.M.

Report of Committee to examine working of Agreement between Kolar Gold Mining Companies and Government.

Q.—310. **Sri G. SIVAPPA** (Holalkere).—

Will the Government be pleased to state:—

(*a*) whether they have appointed a Committee to enquire with regard to the gold duty and royalty paid by the Kolar Gold Mining Company to the Government;

(*b*) if so, what are the recommendations of the Committee;

(*c*) whether the committee looked into the administrative aspect of the Kolar Gold Mining Company?

A.—**Sri H. SIDDAVEERAPPA** (Minister for Home and Industries).—

(*a*) Yes.

(*b*) The Report is placed on the Table of the House.

(*c*) The Committee have examined all aspects of the working of the agreement of 1949 between Government and the Mining Companies.

ಶ್ರೀ ಜಿ. ಶಿವಪ್ಪ.—ತಾವು ಈ ಸಮಿತಿಯನ್ನು ನೇಮಿಸಿದ ಕಾಲದಲ್ಲಿ ಆ ಕಂಪೆನಿಯವರ ಪರವಾಗಿ ಯಾರನ್ನಾದರೂ ನೇಮಿಸಿದ್ದೀರಾ?

Sri H. SIDDAVEERAPPA.—All the details are to be found in the report that is placed in the hands of the Hon'ble Members.

Mr. SPEAKER.—The report is placed on the Table.

Sri G. SIVAPPA.—May I know whether Government has taken . . . .

Sri H. SIDDAVEERAPPA.—The copies of reports have been distributed to the members also, Sir.

ಶ್ರೀ ಜಿ. ಶಿವಪ್ಪ.—ಇತ್ತೀಚೆಗೆ ಕಂಪೆನಿಯವರು ಒಂದು press statement ಹೊರಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

Sri H. SIDDAVEERAPPA.—It is alleged that a representative of the Company has given a statement. His name is not disclosed and another statement is alleged in the name of the Manager.

Mr. SPEAKER.—Only to that extent, I will allow.

ಶ್ರೀ ಜಿ. ಶಿವಪ್ಪ.—ಕಂಪೆನಿಯ ಅಡಳಿತದ ವಿಚಾರದಲ್ಲಿ ತಾವೇನಾದರೂ ಪರಿಶೀಲನೆ ನಡೆಸಿದ್ದೀರಾ?

Sri H. SIDDAVEERAPPA.—A day has been allotted for the discussion on the subject, Sir, and further details may not be asked now.

Sri SYDNEY A. THOMAS.—It is stated that Sri K. S. Vasan has declined to sign the report. Has he given any reasons for not signing the report?

Sri H. SIDDAVEERAPPA.—No reasons have been assigned. He has declined to sign

Sri SYDNEY A. THOMAS.—The bilateral agreement provides for arbitration in case of a dispute. What was the difficulty of the Government to take it for arbitration?

Mr. SPEAKER.—A day has been allotted for the discussion of the subject. I think all these points can be brought forth on that day.

Sri SYDNEY A. THOMAS.—If we have these answers, it will facilitate discussion on that day, Sir. What difficulty did Government fell in referring this matter to arbitration instead of appointing this Committee?

Sri H. SIDDAVEERAPPA.—In the opinion of the Government, the agreement is void *ab initio*.

Sri R. K. PRASAD.—Who were the parties to the agreement, Sir?

Sri H. SIDDAVEERAPPA.—The Government of Mysore and Messrs. John Taylor & Sons.

Sri R. K. PRASAD.—Why did you not refer the matter for arbitration?

Sri H. SIDDAVEERAPPA.—I have already answered.

Sri R. K. PRASAD.—Is there a clause in the agreement that if any dispute arises, it should be referred for arbitration?

Sri H. SIDDAVEERAPPA.—I invite the attention of the Hon'ble Member to